# ಸಮಾಜವಾದಿ ಕ್ರಾಂತಿಯ ಶತಮಾನೋತ್ಸವ

## ಬಿ.ಎಸ್.ಎನ್.ಎಲ್.ಇ.ಯು ಕರ್ನಾಟಕ ವಲಯದ ವಿಚಾರ ಸಂಕಿರಣ.

ಬಿ.ಎಸ್.ಎನ್.ಎಲ್.ಇ.ಯು ವಲಯ ಕಾರ್ಯಕಾರಿ ಸಮಿತಿ ಸಭೆ ದಿನಾಂಕ 23 ಮತ್ತು 24 ಸೆಪ್ಟೆಂಬರ್ 2017 ರಂದು ತುಮಕೂರು ಜಿಲ್ಲೆಯಲ್ಲಿ ನಡೆಯಿತು.

ವಲಯ ಕಾರ್ಯಕಾರಿ ಸಮಿತಿ ಸಭೆಯೊಟ್ಟಿಗೆ, ದಿನಾಂಕ 23 ರ ಬೆಳಗ್ಗೆ 11 ಗಂಟೆಯಿಂದ ಮಹಾನ್ ಸಮಾಜವಾದಿ ಕ್ರಾಂತಿಯ ಕುರಿತು ಒಂದು ವಿಚಾರ ಸಂಕಿರಣವನ್ನು ವಲಯವು ಆಯೋಜಿಸಿತ್ತು.

1917 ರ ಅಕ್ಟೋಬರ್ ನಲ್ಲಿ ಅಂದಿನ ರಷ್ಯಾ ದೇಶದಲ್ಲಿ, ಕಾರ್ಮಿಕರು,ರೈತಾಪಿ ಜನರು ಒಂದುಗೂಡಿ ರಷ್ಯಾವನ್ನು ಆಳುತ್ತಿದ್ದ ಜಾರ್ ದೊರೆಯ ವಿರುದ್ದ ನಡೆಸಿದ ಸಮರದಲ್ಲಿ ವಿಜೇತರಾಗಿ, ಕಾರ್ಮಿಕರ ನಾಯಕತ್ವದ ಸರ್ಕಾರವನ್ನು ಸ್ಥಾಪಿಸಿದರು.

**ಇದನ್ನು ಮಹಾನ್ ಅಕ್ಟೋಬರ್ ಕ್ರಾಂತಿ ಎಂದು ಇತಿಹಾಸದಲ್ಲಿ ಕರೆಯಲಾಗುತ್ತದೆ. ಇದರ ನಂತರ ರಷ್ಯಾ ದೇಶದ ಎಲ್ಲ ಪ್ರಾಂತ್ಯಗಳು, ರಾಜ್ಯಗಳು ಒಂದುಗೂಡಿ, ಸೋವಿಯತ್ ರಷ್ಯ ಎಂಬ ನೂತನ ರಾಷ್ಟ್ರದ ಉದಯವಾಯಿತು. ಈ ಸೋವಿಯತ್ ರಷ್ಯಾ ಸೈನಿಕರು ಮುಂದೆ ಎರಡನೇ ಮಹಾ ಯುದ್ದದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿ, ಜರ್ಮನಿಯ ಫ್ಯಾಸಿಸ್ಟ್ ಹಿಟ್ಲರ್ ನ ಪತನಕ್ಕೆ ಕಾರಣರಾದರು. ಹಿಟ್ಲರ್‌ನ ಅಂತ್ಯ ಕೇವಲ ಜರ್ಮನಿಗೆ ಮಾತ್ರ ಬಿಡುಗಡೆ ಕೊಡಲಿಲ್ಲ; ಇಡೀ ಜಗತ್ತಿಗೆ ಫ್ಯಾಸಿಸಂ ಸಿದ್ದಾಂತದಿಂದ ಮುಕ್ತಿ ನೀಡಿತು.**

1947 ರಲ್ಲಿ ಭಾರತವು ಸ್ವಾತಂತ್ರವನ್ನು ಪಡೆದ ಮೇಲೆ, ನಮ್ಮ ದೇಶದಲ್ಲಿದ್ದ ನಿರುದ್ಯೋಗ ಸಮಸ್ಯೆ, ಬಡತನ ನಿವಾರಣೆ, ರೈತಾಪಿ ಜನರಿಗೆ ಮಾರ್ಗದರ್ಶಕ ಯೋಜನೆಗಳು ಮುಂತಾದ ಹಲವಾರು ಯೊಜನೆಗಳನ್ನು ಅಂದಿನ ಪ್ರಧಾನ ಮಂತ್ರಿ ಶ್ರೀ.ಜವಹರಲಾಲ್ ನೆಹರೂ ಅವರು ದೇಶದ ಮುಂದೆ ಇಟ್ಟರು. ಇವುಗಳನ್ನು ಪಂಚವಾರ್ಷಿಕ ಯೋಜನೆ ಎಂದು ಕರೆಯಲಾಗುತ್ತದೆ. ಆದ್ಯತೆಯ ಮೇಲೆ, ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವ ಯೊಜನೆಯನ್ನು ಕೈಗೆತ್ತಿಕೊಳ್ಳಲಾಯಿತು. ಬೃಹತ್ ಕೈಗಾರಿಕೆಗಳು ಸ್ಥಾಪಿತವಾದಲ್ಲಿ, ದೇಶದ ನಿರುದ್ಯೋಗ ಮತ್ತು ಬಡತನದ ಸಮಸ್ಯೆಗಳನ್ನು ಏಕಕಾಲದಲ್ಲಿ ಪರಿಹರಿಸಬಹುದು ಎಂಬುದು ಆಲೋಚನೆಯಾಗಿತ್ತು. ಅಂದಿನ ಪ್ರಧಾನಿಗಳು, ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲು ಬೇಕಾಗಿದ್ದ ತಾಂತ್ರಿಕ ಪರಿಣಿತಿ ಮತ್ತು ಬಂಡವಾಳ ಹೂಡುವಿಕೆ ಎರಡನ್ನೂ ಬೇಡಿಕೊಂಡು ಎಲ್ಲ ದೇಶಗಳನ್ನೂ ಸುತ್ತಿದರು. ಸೋವಿಯತ್ ರಷ್ಯಾ ಹೊರತು ಪಡಿಸಿ , ಯಾವ ದೇಶವೂ ನಮ್ಮ ಸಹಾಯಕ್ಕೆ ಮುಂದೆ ಬರಲಿಲ್ಲ. ಸೋವಿಯತ್ ರಷ್ಯಾ ದೇಶವು, ಇಂದಿಗೂ ಜಾಗತಿಕ ಮಟ್ಟದಲ್ಲಿ ಅತಿ ಬೃಹತ್ ಕಬ್ಬಿಣದ ಕಾರ್ಖಾನೆ – ಭಿಲಾಯ್ ಉಕ್ಕಿನ ಕಾರ್ಖಾನೆ– ಯನ್ನು ಸ್ಥಾಪಿಸಲು ಮುಂದೆ ಬಂತು. ಅದಕ್ಕೆ ಬೇಕಾಗಿರುವ ಬಂಡವಾಳವನ್ನು ಯಾವುದೇ ಬಡ್ಡಿ ಮತ್ತು ಷರತ್ತುಗಳನ್ನು ಹಾಕದೆ ನೀಡಿತು. ಅದೇ ರೀತಿ, ಕೃಷಿ ಅಭಿವೃದ್ದಿಗಾಗಿ, ಬಾಕ್ರನಂಗಲ್ ಅಣೆಕಟ್ಟು ಯೋಜನೆಯನ್ನು ಸ್ಥಾಪಿಸಲು ಆರ್ಥಿಕ ಮತ್ತು ತಾಂತ್ರಿಕ ಸಹಾಯಹಸ್ತವನ್ನು ಉಚಿತವಾಗಿ ನೀಡಿ, ದೇಶದ ಅಭಿವೃದ್ದಿಗೆ ಸಹಾಯಕವಾಗಿ ನಿಂತಿತು. ಇದರೊಟ್ಟಿಗೆ, ಜಾಗತಿಕ ಮಟ್ಟದಲ್ಲಿ, ಕಾರ್ಮಿಕರ ಶೋಷಣೆಯ ವಿರುದ್ದ , ಕಾರ್ಮಿಕರ ಹಕ್ಕುಚ್ಯುತಿಗಳ ವಿರುದ್ದ, ಬಂಡವಾಳಶಾಹಿ ಧೋರಣೆಗಳ ವಿರುದ್ದ, ಮಧ್ಯಮ ಹಾಗೂ ದುಡಿಯುವ ಜನರನ್ನು ಸಂಘಟಿಸಿ, ಹಲವು ದೇಶಗಳಲ್ಲಿ, ಕಾರ್ಮಿಕ ಕ್ರಾಂತಿಗೆ ನಾಂದಿ ಹಾಡಿತು. ಸಮಾಜವಾದಿ ದೇಶಗಳನ್ನು ಸ್ಥಾಪಿಸಲು ನೆರವು ನೀಡಿತು.

**90 ರ ದಶಕದಲ್ಲಿ ಸೋವಿಯತ್ ಯೂನಿಯನ್ ನ ಪತನದ ನಂತರ, ಮತ್ತೊಮ್ಮೆ ಬಂಡವಾಳ ಶಾಹಿಗಳು ತಲೆಯೆತ್ತಿ ನಿಂತು, ಕಾರ್ಮಿಕ ಹೋರಾಟಗಳಿಗೆ ಅಡ್ಡಿಯುಂಟು ಮಾಡುವ ಕುತಂತ್ರಗಳನ್ನು ಮಾಡುತಿದ್ದಾರೆ.**

**2017 ನೇ ಇಸವಿಯ ಅಕ್ಟೋಬರ್ ತಿಂಗಳಿಗೆ, ಈ ಮಹಾನ್ ಕ್ರಾಂತಿಗೆ 100 ವರುಷ ತುಂಬುತ್ತದೆ. ಇದರ ಅಂಗವಾಗಿ, ನಮ್ಮ ಸಿ.ಹೆಚ್.ಕ್ಯೂ ದೇಶದ ೦೯ ವಲಯಗಳಲ್ಲಿ ಈ ಅಕ್ಟೋಬರ್ ಕ್ರಾಂತಿಯ ಅಥವಾ ಸಮಾಜವಾದಿ ಕ್ರಾಂತಿಯ ವಿಚಾರ ಸಂಕಿರಣಗಳನ್ನು ಆಯೋಜಿಸಲು, ಚೆನ್ನೈನಲ್ಲಿ ನಡೆದ ಅಖಿಲ ಭಾರತ ಸಮ್ಮೇಳನದಲ್ಲಿ ಆದೇಶಿಸಿತ್ತು. ಈ 09 ವಲಯಗಳಲ್ಲಿ ಕರ್ನಾಟಕವೂ ಒಂದು.**

**ಅದರಂತೆ, ನಾವು ಈ ಕಾರ್ಯಕ್ರಮವನ್ನು ವಲಯ ಮತ್ತು ತುಮಕೂರು ಜಿಲ್ಲೆಗಳ ಸಹಭಾಗಿತ್ವದಲ್ಲಿ ತುಮಕೂರಿನಲ್ಲಿ ಯಶಸ್ವಿಯಾಗಿ ಆಯೋಜಿಸಿದ್ದೆವು. ಮುಖ್ಯ ಅತಿಥಿಗಳಾಗಿ, ನಮ್ಮ ರಾಜ್ಯದ ನಿವೃತ್ತ ನ್ಯಾಯಾಧೀಶರಾದ ಶ್ರೀ. ಹೆಚ್.ಎನ್.ನಾಗಮೋಹನ ದಾಸ್ ಮತ್ತು ಸಿ.ಐ.ಟಿ.ಯು ಬೆಂಗಳೂರು ದಕ್ಷಿಣ ಜಿಲ್ಲೆಯ ಕಾರ್ಯದರ್ಶಿ ಕಾಂ. ಕೆ.ಎನ್.ಉಮೇಶ್ ಅವರು ಬಂದು, ಈ ಸಮಾಜವಾದಿ ಕ್ರಾಂತಿಯ ಬಗ್ಗೆ ಎಲ್ಲರೂ ಒಪ್ಪುವಂತ, ಪ್ರಸ್ತುತ ಕಾರ್ಮಿಕ ಸಂಘಟನೆಗಳ ಪರಿಸ್ಥಿತಿಯನ್ನು ಅವಲೋಕಿಸುವಂತ ಮನ ತಟ್ಟುವ**

ವಿಚಾರ ಪೂರಿತ ಮಾತುಗಳನ್ನು ಆಡಿದರು. ಜೊತೆಗೆ, ನಮ್ಮ ಸಂಘಟನೆಯ ಪ್ರಧಾನ ಕಾರ್ಯದರ್ಶಿಗಳಾದ ಕಾಂ.ಅಭಿಮನ್ಯು ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ, ನಮ್ಮ ಸಂಘಟನೆಯು ಸಮಾಜವಾದಿ ಕ್ರಾಂತಿಯ ವಿಚಾರ ಸಂಕಿರಣವನ್ನು ಆಯೋಜಿಸಬೇಕಾಗಿರುವ ಜರೂರತ್ತು ಮತ್ತು ಇಂದಿನ ಕಾರ್ಮಿಕ ಸಂಘಟನೆಗಳ ಪರಿಸ್ಥಿತಿ ಕುರಿತು ಪ್ರಬುದ್ಧ ಭಾಷಣವನ್ನು ಮಾಡಿದರು. ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಕಾಂ. ಸುದರ್ಶನ್ ಅವರು ವಿಚಾರ ಸಂಕಿರಣದಲ್ಲಿ ತಮ್ಮ ನಿಲುವುಗಳನ್ನು ಅಭಿವ್ಯಕ್ತಿಸಿದರು. ವಲಯದ ಅಧ್ಯಕ್ಷರಾದ ಕಾಂ.ಎಮ್.ಸಿ.ಬಾಲಕೃಷ್ಣ ಅವರು ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ವಹಿಸಿಕೊಂಡು, ಅಧ್ಯಕ್ಷೀಯ ಮಾತುಗಳನ್ನು ಆಡಿದರು;ವಲಯ ಸಂಘಟನೆಯ ಪೋಷಕರಾದ ಕಾಂ. ಬಿ.ಪಿ.ನಾರಾಯಣ್ ಅವರೂ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಕಾರ್ಯಕ್ರಮದ ಫೋಟೋಗಳನ್ನು ಇಲ್ಲಿ ಕೊಡಲಾಗಿದೆ.

ಗುಂಡಣ್ಣ ಸಿ.ಕೆ. ವಲಯ ಕಾರ್ಯದರ್ಶಿ.


















